ತರಲು ವ್ಯವಸ್ಥೆ ಮಾಡಿ ಅವನ್ನು ಅಥೆನ್ಸ್‌ನಲ್ಲಿನ ರಾಷ್ಟ್ರೀಯ ಪ್ರಾಕ್ತನನ ಮ್ಯೂಸಿಯಂಗೆ ಸಾಗಿಸಿತು. ಅವುಗಳ ಜೊತೆಯಲ್ಲೇ ತುಕ್ಕು ಹಿಡಿದಿದ್ದ ನಿಘಂಟು ಗಾತ್ರದ ವಸ್ತುವೊಂದಿತ್ತು. ಸುಂದರ ಶಿಲ್ಪಗಳಂಥ ವಸ್ತುಗಳನ್ನು ಮೇಲಕ್ಕೆ ತಂದ ಉತ್ಸಾಹದಲ್ಲಿದ್ದಾಗ ಈ ತುಕ್ಕು ಹಿಡಿದ ಉಂಡೆಯಂತಹ ವಸ್ತು ಯಾರ ಗಮನವನ್ನೂ ಸೆಳೆಯದೆ, ಅಲ್ಲೇ ತೆರೆದ ಪೆಟ್ಟಿಗೆಯೊಂದರಲ್ಲಿ ಮ್ಯೂಸಿಯಂನ ಮೂಲೆಯೊಂದರಲ್ಲಿ ಬಿದ್ದಿತ್ತು. ನೀರಿನಿಂದ ಹೊರಗೆ ಬಂದದ್ದಕ್ಕೋ ಅಥವಾ ಬಿಸಿಲಿಗೋ ಏನೋ ಕೆಲವು ತಿಂಗಳ ನಂತರ ಅದು ಬಿರಿದು, ಅದರೊಳಗೆ ಗಿಯರ್ ಚಕ್ರಗಳ ಕುರುಹುಗಳು, ನಿಖರವಾಗಿ ಗುರುತುಮಾಡಿದ ವೃತ್ತಾಕಾರದ ಮಾಪನದ ಗುರುತುಗಳು ಹಾಗೂ ಪ್ರಾಚೀನ ಗ್ರೀಕ್ ಭಾಷೆಯ ಲಿಪಿಯ ಕೆತ್ತನೆಗಳು ಕಂಡುಬಂದಾಗ ಇದ್ದಕ್ಕಿದ್ದಂತೆ ವಸ್ತುಪ್ರದರ್ಶನದ ಅಧಿಕಾರಿಗಳ ಗಮನ ಅದರ ಮೇಲೆ ಹರಿಯಿತು.

ಆ ತುಕ್ಕು ಹಿಡಿದ ವಸ್ತು ಯಾವುದೋ ಯಾಂತ್ರಿಕ ಚಲನೆಯ ವಸ್ತುವಂತೆ ಕಂಡುಬಂದದ್ದರಿಂದ ಹಾಗೂ ಅದು ಆಂಟಿಕಿತೆರಾ ದ್ವೀಪದ ಬಳಿ ದೊರಕಿದ್ದುದರಿಂದ ಅದನ್ನು 'ಆಂಟಿಕಿತೆರಾ ಮೆಕ್ಯಾನಿಸಂ' ಎಂದು ಕರೆದರು. ಅದು ವಸ್ತುಸಂಗ್ರಹಾಲಯದ ತಜ್ಞರಲ್ಲಿ ಕುತೂಹಲ, ಜೊತೆಗೆ ತಲ್ಲಣವನ್ನೂ ಉಂಟುಮಾಡಿತು. ಅದುವರೆಗೂ ಜಗತ್ತಿನಲ್ಲಿ ದೊರೆತಿರುವ ಪ್ರಾಚೀನ ಕಾಲದ ವಸ್ತುಗಳಲ್ಲಿ ಎಲ್ಲಿಯೂ ಒಂದೇ ಒಂದು ಗಿಯರ್ ಚಕ್ರ, ಗಡಿಯಾರದಂತಹ ಮುಳ್ಳು ಅಥವಾ ಮಾಪನದ ಗುರುತುಗಳುಳ್ಳ ಯಾಂತ್ರಿಕ ಸಾಧನ ದೊರಕಿರಲಿಲ್ಲ. ಅಷ್ಟಲ್ಲದೆ, ಆಂಟಿಕಿತೆರಾ ಮೆಕ್ಯಾನಿಸಂ ದೊರೆತ ನಂತರ ಅಷ್ಟು ಹಳೆಯದಾದ ಆ ರೀತಿಯ ಮತ್ತೊಂದು ಉಪಕರಣ ಅಥವಾ ಸಾಧನವೂ ಎಲ್ಲಿಯೂ ಇದುವರೆಗೆ ದೊರೆತಿಲ್ಲ.

ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಜನ ತಜ್ಞರು, ಸಂಶೋಧಕರು ಆ ಮೆಕ್ಯಾನಿಸಂ ಅಧ್ಯಯನಕ್ಕಾಗಿ ಶ್ರಮಿಸುತ್ತಿದ್ದಾರೆ ಹಾಗೂ ಹಲವಾರು ಹೊಸ ವಿಷಯಗಳನ್ನು ಬೆಳಕಿಗೆ ತಂದಿದ್ದಾರೆ. ಅವರೆಲ್ಲರ ಶ್ರಮ ಹಾಗೂ ಎಕ್ಸ್‌ರೇ ಮುಂತಾದ ತಂತ್ರಜ್ಞಾನಗಳ ಮೂಲಕ ಅದರ ರಚನೆಯನ್ನು ಭೇದಿಸಿ, ಆಂಟಿಕಿತೆರಾ ಮೆಕ್ಯಾನಿಸಂ ಹೇಗೆ ಮತ್ತು ಯಾವುದಕ್ಕಾಗಿ ಕಾರ್ಯನಿರ್ವಹಿಸುತ್ತಿತ್ತು ಎನ್ನುವುದನ್ನು ಬಹುಪಾಲು ಕಂಡುಕೊಂಡಿದ್ದಾರೆ.

## 42 ಸೂಚನೆಗಳ ಮೆಕ್ಯಾನಿಸಂ

ಅದು ಕೈಯಿಂದ 'ಕೀಲಿ' ಕೊಡುವ ಗಡಿಯಾರದಂತಹ ಸಾಧನ. ಆಗ ಭೂಕೇಂದ್ರಿತ ಸಿದ್ಧಾಂತದಲ್ಲಿ (ಭೂಮಿಯೇ ವಿಶ್ವದ ಕೇಂದ್ರ ಎಂಬ ಸಿದ್ಧಾಂತ) ನಂಬಿಕೆ ಇದ್ದುದರಿಂದ ಅದರ ಆಧಾರದ ಮೇಲೆಯೇ ರಚಿಸಲಾಗಿದೆ. ಆದರೆ ಅದು ಆಧುನಿಕ ಗಡಿಯಾರದಂತೆ ಗಂಟೆ ಹಾಗೂ ನಿಮಿಷಗಳನ್ನು ತೋರಿಸುವ ಬದಲಿಗೆ 'ಆಕಾಶ ಸಮಯ'ವನ್ನು ತೋರಿಸುತ್ತಿತ್ತು. ಅಂದರೆ ಸೂರ್ಯನಿಗೆ, ಚಂದ್ರನಿಗೆ ಹಾಗೂ ಆಗ ಬರಿಗಣ್ಣಿಗೆ ಕಾಣುತ್ತಿದ್ದ ಐದು ಗ್ರಹಗಳಿಗೆ (ಬುಧ,



ಆಂಟಿಕಿತೆರಾ ಮೆಕ್ಯಾನಿಸಂ ಗಿಯರ್‌ಗಳ ರಚನೆ ಹೀಗಿದ್ದಿರಬಹುದೆ? (ಚಿತ್ರಕೃಪೆ: ಟೋನಿ ಫ್ರೀತ್ ಮತ್ತು ಜೆನ್ ಕ್ರಿಶ್ಚಿಯನ್‌ಸೆನ್, ಸೈಂಟಿಫಿಕ್ ಅಮೆರಿಕನ್)

ಶುಕ್ರ, ಮಂಗಳ, ಗುರು ಹಾಗೂ ಶನಿ) ಪ್ರತ್ಯೇಕ ಮುಳ್ಳುಗಳನ್ನು ಹೊಂದಿತ್ತು. ಆಯತಾಕಾರದ ತಿರುಗುವ ರಚನೆ ಚಂದ್ರನ ವಿವಿಧ ಹಂತಗಳನ್ನು ತೋರಿಸುತ್ತಿತ್ತು ಹಾಗೂ ಅದರ ಹಿಂಭಾಗದಲ್ಲಿದ್ದ ಪ್ರತ್ಯೇಕ ಡಯಲ್‌ಗಳು ದಿನಸೂಚಿಯಂತೆ ಚಂದ್ರನ ಹಾಗೂ ಸೂರ್ಯನ ಗ್ರಹಣಗಳ ಸಮಯವನ್ನು ಪ್ರತ್ಯೇಕವಾಗಿ ಸೂಚಿಸುತ್ತಿತ್ತು ಅಥವಾ ಮುಂದಿನ ಒಂದು ನಿರ್ದಿಷ್ಟ ದಿನದಂದು ಮಂಗಳ ಅಥವಾ ಮತ್ತಾವುದಾದರೂ ಗ್ರಹ ಯಾವ ಸ್ಥಾನದಲ್ಲಿರುತ್ತದೆಂದು ತಿಳಿಯಬಹುದಾಗಿತ್ತು.

ಒಂದು ನಿರ್ದಿಷ್ಟ ದಿನಾಂಕದಂದು ನಕ್ಷತ್ರಗಳ ಉಗಮ ಹಾಗೂ ಅಸ್ತಮಾನವನ್ನು ಅದರ ಮೇಲಿನ ಲಿಪಿಯಲ್ಲಿ ಬರೆದಿತ್ತು. ಅದರಲ್ಲಿನ ಒಂದು ನಿರ್ದಿಷ್ಟ ಡಯಲ್ ಋತುಮಾನಗಳನ್ನು ಸೂಚಿಸಿ ಆಗಿನ ರೈತರಿಗೆ ಉಪಯುಕ್ತ ಮಾಹಿತಿ ಒದಗಿಸುತ್ತಿತ್ತು. ಅಷ್ಟಲ್ಲದೆ, ಅದು ಆಗ ಗ್ರೀಸ್‌ನಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಒಲಿಂಪಿಕ್ ಕ್ರೀಡೆಗಳು ಪ್ರಾರಂಭವಾಗಬೇಕಾದ ಸಮಯವನ್ನು ಹಾಗೂ ಕೆಲವು ಚಾರಿತ್ರಿಕ ಘಟನೆಗಳ ಸಮಯವನ್ನೂ ಸೂಚಿಸುತ್ತಿತ್ತಂತೆ. ಒಟ್ಟು ಸುಮಾರು 42 ಆ ರೀತಿಯ ಸೂಚನೆಗಳನ್ನು ಆಂಟಿಕಿತೆರಾ ಮೆಕ್ಯಾನಿಸಂ ನೀಡುತ್ತಿತ್ತಂತೆ. ಅದರ ಹಿಂಭಾಗ ಕಂಚಿನ ಫಲಕವೊಂದರ ಮೇಲೆ ಆ ಉಪಕರಣದ ಬಳಕೆ ಬಗ್ಗೆ ಸೂಚನೆಗಳನ್ನು 'ಕೊಯ್ನೆ ಗ್ರೀಕ್' ಲಿಪಿಯಲ್ಲಿ ನೀಡಲಾಗಿದೆ. ಆದರೆ ಆ ಉಪಕರಣವನ್ನು ಬಳಸಬಲ್ಲ ವ್ಯಕ್ತಿಗೆ ಖಗೋಳ ವಿಜ್ಞಾನದ ಹಾಗೂ ಅಂತಹ ಖಗೋಳ ವಿಜ್ಞಾನ ಉಪಕರಣಗಳ ಅರಿವು ಬೇಕಾಗಿತ್ತೆನ್ನಿಸುತ್ತದೆ.

ಅದು ಅತ್ಯಂತ ಸಂಕೀರ್ಣ ವಿನ್ಯಾಸದ ಉಪಕರಣ ಹಾಗೂ ಅತಿ ವಿದ್ವತ್ತಿನ ಖಗೋಳ ವೈಜ್ಞಾನಿಕ ಜ್ಞಾನದ ಹಿನ್ನೆಲೆಯಿಂದ ಅತ್ಯಂತ ಎಚ್ಚರ ಮತ್ತು ನಿಖರತೆಯಿಂದ ವಿನ್ಯಾಸಗೊಳಿಸಲಾಗಿದೆ. ಅದೂ 2000 ವರ್ಷಗಳ ಹಿಂದೆ. ಹಾಗಾದರೆ ಅದು ಯಾವ ಪ್ರದೇಶದ್ದು ಹಾಗೂ ಅದರ ನಿಖರ ಬಳಕೆಯ ಉದ್ದೇಶ ಏನಾಗಿತ್ತು? ಆಗ ಗ್ರೀಕ್ ವಿಜ್ಞಾನ ಮತ್ತು ತಂತ್ರಜ್ಞಾನ ನಿಜವಾಗಿಯೂ ಅಷ್ಟೊಂದು ಪ್ರಾವೀಣ್ಯತೆ ಸಾಧಿಸಿತ್ತೆ?

ಈ ಆಂಟಿಕಿತೆರಾ ಮೆಕ್ಯಾನಿಸಂ ಒಗಟನ್ನು ಬಿಡಿಸಲು ಯತ್ನಿಸಿದ ಮೊದಲ ವ್ಯಕ್ತಿ ಆಲ್ಬರ್ಟ್ ರೆಹ್ಮ್ ಎಂಬ ಜರ್ಮನಿಯ ಭಾಷಾಶಾಸ್ತ್ರಜ್ಞ. ಆತ 1905ರಲ್ಲಿ ಅದೊಂದು ಗಣಕಯಂತ್ರ ಎಂದ. ಅದಾದ ಐವತ್ತು ವರ್ಷಗಳ ನಂತರ ಕೊಂಚ



ಆಂಟಿಕಿತೆರಾ ಮೆಕ್ಯಾನಿಸಂನೊಂದಿಗೆ ಲೇಖಕರು